Government of Karnataka

# KARNATAKA EXAMINATIONS AUTHORITY

Sampige Road, 18th Cross, Malleshwaram, Bangalore-560 012
Phone: 080-23460460 (5 lines) Fax: 080-23461576 E-mail: keauthority-kar@nic.in Website: http://kea.kar.nic.in

**No. ED/KEA/Legal Cell/CR-22/ 2015-16** **Date: 09-01-2016**

# ADMISSION TO PROFESSIONAL COURSES IN KARNATAKA FOR THE YEAR 2016-17

1. Applications are invited from eligible candidates of Karnataka including the wards of Jammu & Kashmiri Migrants for registration to the "Common Entrance Test-2016" to Professional Courses detailed herein for the seats to be notified by the Government in the Professional Educational Institutions in the state of Karnataka for the academic year 2016-17.
2. Academic Eligibility: As per Rule 5 (1) of Karnataka Selection of Candidates for Admission to Government seats in Professional Educational Institutions Rules, 2006, **No candidate shall be eligible for admission to Government Seats unless he is a citizen of India and satisfies any one of the eligibility conditions hosted on the KEA Website http://kea.kar.nic.in The candidates who do not satisfy any of the Clauses / Eligibility Criteria will not be eligible for admission to professional courses under Government quota seats through KEA.**

| Sl. No. | For Admission to 1st Year | Academic Eligibility | | Criteria for Determination of Merit / Rank |
|---|---|---|---|---|
| | | In Qualifying Examination, candidate should have | In CET- Examination | |
| 1 | Medical / Dental (MBBS / BDS) | Passed in 2nd PUC / 12th Std / Equivalent Exam with English as one of the Languages and obtained a Minimum of 50% of Marks in aggregate in Physics, Chemistry, Biology subjects. **(Aggregate of three)** (40% for SC, ST, Cat-1, 2A, 2B, 3A and 3B category candidates) | Minimum of 50% of marks in aggregate in PCB Subjects (40% for SC, ST, Cat-1, 2A, 2B, 3A and 3B category candidates) | Only on the basis of marks obtained in PCB Subjects in CET. |
| 2 | Ayurveda, Homoeopathy, Unani, Naturopathy and Yoga (ISM & H) | Passed in 2nd PUC / 12th Std / Equivalent Exam with English as one of the Languages and obtained a Minimum of 50% of Marks in aggregate in Physics, Chemistry, Biology subjects. **(Aggregate of three)** (40% for SC, ST, Cat-1, 2A, 2B, 3A and 3B category candidates) | No Minimum Marks prescribed in CET | By taking marks in equal proportions in QE and CET in PCB subjects. |
| 3 | Engineering / Technology (B.E. / B.Tech) | Passed in 2nd PUC / 12th Std / Equivalent Exam with English as one of the Languages and obtained a Minimum of 45% of Marks in aggregate in Physics and Mathematics along with Chemistry / Bio-Technology / Biology / Electronics / Computer. (40% for SC, ST, Cat-1, 2A, 2B, 3A and 3B category candidates) | No Minimum Marks prescribed in CET | By taking marks in equal proportions in QE and CET in PCM subjects. |
| 4 | Architecture (B.Arch) | Passed in 2nd PUC / 12th Std / Equivalent Exam with Mathematics as Compulsory optional subject and obtained a Minimum of 50% of Marks in aggregate in all the subjects. (45% for SC, ST, Cat-1, 2A, 2B, 3A and 3B category candidates) | Minimum of 40% of Marks in NATA for all categories of students including SC, ST and Other Backward Classes. | By taking marks obtained in all subjects in Qualifying Examination and NATA taken in equal proportions |
| | | NOTE: For admission to Architecture course candidate should compulsorily appear for NATA conducted by the Council of Architecture. The last date to appear for NATA is on or before **20-05-2016 and last** date to submit the NATA Score Card to KEA is on or before **24-05-2016.** Visit KEA Website for list of examination centres conducting NATA. | | |
| 5 | **B.Sc. (Agriculture), B.Sc. (Forestry), B.Sc. (Sericulture), B.Sc. (Agri. Biotech), B.Sc. (Horticulture), B.H.Sc., (Home Science) B.Tech. (Food Technology), B.Tech. (Dairy Technology), B.F.Sc., (Bachelor of Fisheries Science) B.Tech. (Food Science & Tech.), B.Sc. (Ag. Marketing and Co-operation) B. Tech (Agriculture Engineering)** | **Passed in 2nd PUC / 12th Std / Equivalent exam with Physics, Chemistry, Mathematics and Biology as optional subjects.** | **No Minimum Marks prescribed in CET** | **By taking marks in equal proportions in QE and CET in PCMB subjects.** |
| 6 | **Bachelor of Veterinary Science and Animal Husbandry (B.V.Sc. & A.H.)** | **Passed in 2nd PUC / 12th Std. and obtained an aggregate minimum of 50% marks in Physics, Chemistry, Biology and English subjects. (Aggregate of four) (40% for SC, ST, Cat-1, 2A, 2B, 3A and 3B category candidates)** | **No Minimum Marks prescribed in CET** | **Only on the basis of marks obtained in PCB in CET.** |
| 7 | **B-Pharma** | **Passed in 2nd PUC / 12th Std with Physics, Chemistry and Biology or Physics, Chemistry and Mathematics and obtained** a Minimum of 45% of Marks in aggregate in Physics, Chemistry, Biology subjects. (40% for SC, ST, Cat-1, 2A, 2B, 3A and 3B category candidates. OR Passed in Diploma in Pharmacy Examination from an institution approved by the Pharmacy Council of India Under Section 12 of the Pharmacy Act and has secured minimum of 45% marks. (40% for SC, ST, Cat-1, 2A, 2B, 3A and 3B category candidates. | **No Minimum Marks prescribed in CET** | Only on the basis of marks obtained in PCM or PCB Subjects (whichever is higher) in CET |
| 8 | **2nd Year B. Pharma** | Passed in Diploma in Pharmacy Examination from an institution approved by the Pharmacy Council of India Under Section 12 of the Pharmacy Act and has secured minimum of 45% marks. (40% for SC, ST, Cat-1, 2A, 2B, 3A and 3B category candidates. | **No Minimum Marks prescribed in CET** | Only on the basis of marks obtained in PCM or PCB Subjects (whichever is higher) in CET |
| 9 | **Pharma-D** | **Passed in 2nd PUC / 12th Std with Physics, Chemistry and Biology or Physics, Chemistry and Mathematics** OR Passed in Diploma in Pharmacy Examination from an institution approved by the Pharmacy Council of India Under Section 12 of the Pharmacy Act. | **No Minimum Marks prescribed in CET** | Only on the basis of marks obtained in PCM or PCB Subjects (whichever is higher) in CET |

**NOTE:**

**(I) A CANDIDATE WHO HAD OBTAINED A SEAT IN ANY DISCIPLINE THROUGH KEA (CET CELL) IN ANY OF THE PREVIOUS YEARS WILL NOT BE ELIGIBLE FOR ALLOTMENT OF A SEAT TO THE SAME DISCIPLINE DURING 2016. HOWEVER, HE / SHE IS ELIGIBLE TO APPEAR FOR CET-2016 FOR ALLOTMENT OF SEAT IN ANY OTHER DISCIPLINE AS PER RULE 15 (5) OF KARNATAKA SELECTION OF CANDIDATES FOR ADMISSION TO GOVERNMENT SEATS IN PROFESSIONAL EDUCATIONAL INSTITUTIONS RULES, 2006.**

**(II) THE MINIMUM PASSING MARKS FOR ALL HORANADU AND GADINADU KANNADIGA CANDIDATES SHALL BE 12 OUT OF 50 MARKS IN KANNADA LANGUAGE EXAMINATION CONDUCTED BY KEA (4TH STANDARD LEVEL) IN ORDER TO BE CONSIDERED FOR ASSIGNMENT OF RANKS AND TO BECOME ELIGIBLE FOR ALLOTMENT OF SEATS IN CET-2016.**

**(III) IN THE CASE OF AGRICULTURIST QUOTA, THE MERIT LIST WILL BE PREPARED BASED ON 25% MARKS EACH, SECURED IN CONCERNED COMBINATIONS IN II YEAR PUC (PCMB) & CET AND 50% MARKS SECURED IN THE PRACTICAL TEST. IN CASE OF B.V.SC & AH MERIT WILL BE PREPARED BASED ON 50% OF MARKS SECURED IN CET (PHYSICS, CHEMISTRY AND BIOLOGY) AND 50% OF MARKS SCORED IN THE PRActical test.**

**3. How to Apply?**

| | |
|---|---|
| Step1: | Please download the e-brochure from KEA Website **http://kea.kar.nic.in** and read the instructions carefully before start entering the application online. Enter all the details ONLINE by browsing URL on web **http://kea.kar.nic.in** by selecting "**CET-2016 UG Online Application**". After completion of entry of all the details candidate's will receive an application ID and Password to their registered mobile phone number and to email address and also the same information will be displayed on the screen. |
| Step 2: | Upload the scanned copy of recent passport size Colour Photograph, Signature and Left Hand Thumb Impression in JPG / JPEG format separately. |
| Step 3: | Print the Challan copy which is in triplicate. Candidates of Karnataka origin have to pay an amount of Rs. 650/- for General and OBC (Rs.500/- for SC / ST Category-1 of Karnataka candidates only). Rs.750/- in case of candidates residing outside the state of Karnataka and Rs.5,000/- in case of candidates residing outside India. The candidates have to pay the requisite fee in any of the branch of the Banks prescribed. The bank will retain bank copy of the Challan and handover the remaining two copies of the Challan to the candidates. The candidates who are residing outside India shall pay the fees in the form of Demand Draft drawn in favour of Executive Director, Karnataka Examinations Authority, payable at Bangalore, the demand draft should be sent to KEA address by mentioning the application number. |
| Step 4: | Take a printout of the application form on A-4 Size paper. Obtain Principal seal and signature from the college where you have studied 2nd PUC or 12th Standard on the space provided in the printed form. The same copy should be produced during document verification. |

Note: Candidates should note down their application ID and Password until the completion of filling of the online application. Candidate has to enter all the required details in the form, failing which their application will not be considered. Applications without Photo and signature will not be considered as valid. Candidates are not allowed to edit their application after selecting declaration / taking the final printout.

| | |
|---|---|
| Commencement of Entry of Application Online: | 13-01-2016 |
| Last Date to Enter Application details online | 13-02-2016 |
| Last date to pay the fees in the banks specified. | 15-02-2016 |
| Downloading of Admission Tickets on or after: | 15-04-2016 |

- Candidates are advised to verify and confirm that they are fulfilling any one of the Eligibility Clauses updated on the KEA Website **http://kea.kar.nic.in** and also in the e-brochure before applying for admission to Government seats in Professional Colleges in the state of Karnataka for the year 2016. For any reason the fee paid by the candidates will not be refunded.
- **The information / particulars furnished by the candidates in their CET - 2016 online application form will be deemed as "Final" and be the basis for further process. The information furnished in the CET-2016 online application form with regard to Caste / Category and Annual Income remains the same for the purpose of assignment of ranks / selection or allotment of a seat and no change will be entertained in future for any reason.**

**BRIEF NOTE ON ONLINE SEAT SELECTION**

**4.** The seat allotment to the above mentioned courses will be done **ONLINE by obtaining OPTIONS** from the eligible candidates in the order of merit / rank in CET-2016 and based on the options given by them.

**5. KEA** is planning to introduce online verification of documents from this year. Otherwise, Verification of documents will be done in at least 13 notified helpline centres across the state after declaration results / publication of merit list. Only upon verification of documents and issue of verification slip, candidate will be allowed to enter the options. Candidates can enter any number of options of their choice on their own arrangement. The candidate also has a provision to take a print out in each round. Every candidate shall be given high security user ID and Secret Key which the candidate then has to login and change it to password as per his / her choice. The details of centres will be made available on the Website **http://kea.kar.nic.in** and also in the brochure.

**6.** The college and course will be allotted by the computer based on their ranking and options and the seats available in a particular college as per the seat matrix issued by the Government. Further details can be seen in the CET Brochure - 2016 and also will be notified on the website **http://kea.kar.nic.in.**

**7.** The documents verification of Horanadu / Gadinadu Kannadigas and all Special Categories like Defence, Ex-defence, NCC, Sports, Physically Disabled, Anglo Indian, CAPF, Jammu and Kashmir, Scouts and Guides will be done only in the premises of KEA office at 18th Cross, Malleshwaram, Bangalore.

**COMMON ENTRANCE TEST – 2016 TIME TABLE**

| Date | Day | Timings | Subject | Marks |
|---|---|---|---|---|
| **04-05-2016** | Wednesday | 10.30 am – 11.50 am | Biology | 60 |
| | | 02.30 pm – 03.50 pm | Mathematics | 60 |
| **05-05-2016** | Thursday | 10.30 am – 11.50 am | Physics | 60 |
| | | 02.30 pm – 03.50 pm | Chemistry | 60 |

**KANNADA LANGUAGE TEST – ONLY IN BANGALORE**

| | | | | |
|---|---|---|---|---|
| **06-05-2016** | Friday | 11.30 am to 12.30 pm | ONLY FOR HORANADU AND GADINADU KANNADIGA CANDIDATES | 50 |

**PRACTICAL EXAMINATION TIME TABLE FOR AGRICULTURIST QUOTA**

| | |
|---|---|
| **12-05-2016 to 18-05-2016** | **Verification of Documents for Agriculturist at the respective Practical Test Centres** |

| Date | Day | Timings | Subject | Marks |
|---|---|---|---|---|
| **20-05-2016** | **Friday** | **9.00 am onwards** | **PRACTICAL EXAMINATION on** "Identification of Agriculture Related Specimens" **TO CLAIM SEAT UNDER AGRICULTURIST QUOTA*** | 200 |

***Minimum of 50% marks in Practical Examination is required to claim seat under Agriculturist Quota. Further, Agriculturist Quota is applicable only for Under Graduate courses detailed in Para 2 (5 and 6) above. Practical Examination will be conducted at Bangalore, Hassan, Mandya, Raichur, Mysore, Munirabad (Koppal District), Arabhavai (Gokak Tq) Tamaka (Kolar District), Mangalore, Bidar, Bagalkot, Dharwad and Shimoga.**

**Sd/- D.S. Ramesh, IAS, Executive Director**

KEA

ಕರ್ನಾಟಕ ಸರ್ಕಾರ

# ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012.

ದೂರವಾಣಿ: 080–23460460 (5 ಲೈನ್‌ಗಳು) ಫ್ಯಾಕ್ಸ್: 080–23461576 ಇ–ಮೇಲ್: keauthority-kar@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಲೀಗಲ್ ಸೆಲ್/ಸಿ.ಆರ್.22/2015–16 ದಿನಾಂಕ: 09–01–2016

## 2016–17ನೇ ಸಾಲಿಗೆ ಕರ್ನಾಟಕದ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ

1. ಕರ್ನಾಟಕ ರಾಜ್ಯದಲ್ಲಿರುವ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಈ ಕೆಳಗಿನ ಕೋರ್ಸುಗಳಿಗೆ 2016–17ನೇ ಶೈಕ್ಷಣಿಕ ವರ್ಷಕ್ಕೆ ಸರ್ಕಾರವು ನಿಗದಿಪಡಿಸುವ ಸೀಟುಗಳ ಪ್ರವೇಶಕ್ಕಾಗಿ ನಡೆಸಲಾಗುವ ಸಾಮಾನ್ಯ ಪ್ರವೇಶ ಪರೀಕ್ಷೆ 2016 ಕ್ಕೆ ಕರ್ನಾಟಕದ ಅರ್ಹ ಅಭ್ಯರ್ಥಿಗಳಿಂದ ಹಾಗೂ ಜಮ್ಮು ಮತ್ತು ಕಾಶ್ಮೀರಿ ವಲಸೆಗಾರರ ಅಭ್ಯರ್ಥಿಗಳಿಂದಲೂ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
2. ಶೈಕ್ಷಣಿಕ ಅರ್ಹತೆ: ನಿಯಮ 5 (1) ರ **Karnataka Selection of Candidates for Admission to Government seats in Professional Educational Institutions Rules, 2006**, ಅನ್ವಯ ಯಾವುದೇ ಅಭ್ಯರ್ಥಿಯು ಭಾರತೀಯ ಪ್ರಜೆಯಾಗಿರಬೇಕು ಮತ್ತು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಪ್ರಚುರ ಪಡಿಸಿರುವ ಅರ್ಹತಾ ಕಂಡಿಕೆಗಳಲ್ಲಿ (Eligibility Clauses) ಯಾವುದಾದರು ಒಂದರಲ್ಲಿ ಅರ್ಹತೆ ಹೊಂದಿರಬೇಕು ಇಲ್ಲದಿದ್ದಲ್ಲಿ ಅಂತಹ ಅಭ್ಯರ್ಥಿಗಳು ಸರ್ಕಾರಿ ಕೋಟದ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಪಡೆಯಲು ಅರ್ಹತೆಯನ್ನು ಹೊಂದುವುದಿಲ್ಲ.

| ಕ್ರಮ ಸಂಖ್ಯೆ | ಮೊದಲನೇ ವರ್ಷದ ಕೋರ್ಸಿಗೆ ಪ್ರವೇಶ | ಶೈಕ್ಷಣಿಕ ಅರ್ಹತೆ | | ಮೆರಿಟ್ / ರ್‍ಯಾಂಕ್ ನಿಗದಿ ಪಡಿಸುವುದಕ್ಕೆ ಮಾನದಂಡ |
|---|---|---|---|---|
| | | ಅರ್ಹತಾ ಪರೀಕ್ಷೆಯಲ್ಲಿ ಅಭ್ಯರ್ಥಿಯು | ಸಿಇಟಿ ಪರೀಕ್ಷೆಯಲ್ಲಿ ಅಭ್ಯರ್ಥಿಯು | |
| 1. | ವೈದ್ಯಕೀಯ ಮತ್ತು ದಂತ ವೈದ್ಯಕೀಯ (ಎಂ.ಬಿ.ಬಿ.ಎಸ್. / ಬಿ.ಡಿ.ಎಸ್.) | ಕರ್ನಾಟಕದ ಎರಡನೇ ಪಿಯುಸಿ / 12ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರಗಳನ್ನು ಐಚ್ಛಿಕ ವಿಷಯಗಳನ್ನಾಗಿ ಹಾಗೂ ಇಂಗ್ಲೀಷನ್ನು ಒಂದು ಭಾಷಾ ವಿಷಯವನ್ನಾಗಿ ಅಭ್ಯಸಿಸಿ ಅರ್ಹತಾ ಪರೀಕ್ಷೆಯ ಪಿಸಿಬಿ ವಿಷಯಗಳಲ್ಲಿ ಒಟ್ಟಾರೆ ಕನಿಷ್ಠ ಶೇಕಡ 50ರಷ್ಟು ಅಂಕಗಳನ್ನು ಪಡೆದು ತೇರ್ಗಡೆ ಹೊಂದಿರಬೇಕು. (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಾದ ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ ಗಳಿಗೆ ಸೇರಿರುವ ಅಭ್ಯರ್ಥಿಗಳು ಶೇ. 40%). | ಪಿಸಿಬಿ ವಿಷಯಗಳಲ್ಲಿ ಒಟ್ಟಾರೆ ಕನಿಷ್ಠ ಶೇಕಡ 50ರಷ್ಟು ಅಂಕಗಳನ್ನು ಪಡೆದಿರಬೇಕು. (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಾದ ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ ಗಳಿಗೆ ಸೇರಿರುವ ಅಭ್ಯರ್ಥಿಗಳು ಶೇ. 40%) | ಸಾಮಾನ್ಯ ಪ್ರವೇಶ ಪರೀಕ್ಷೆಯ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ ವಿಷಯಗಳಲ್ಲಿ ಪಡೆದಿರುವ ಒಟ್ಟು ಅಂಕಗಳನ್ನು ಆಧರಿಸಿ, ರ್‍ಯಾಂಕ್ ಪ್ರಕಟಿಸಲಾಗುವುದು. |
| 2. | ಆಯುರ್ವೇದ / ಹೋಮಿಯೋಪತಿ / ಯುನಾನಿ / ನ್ಯಾಚುರೋಪತಿ ಮತ್ತು ಯೋಗ (ಆಯುಷ್) | ಕರ್ನಾಟಕದ ಎರಡನೇ ಪಿಯುಸಿ / 12ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರಗಳನ್ನು ಐಚ್ಛಿಕ ವಿಷಯಗಳನ್ನಾಗಿ ಹಾಗೂ ಇಂಗ್ಲೀಷನ್ನು ಒಂದು ಭಾಷಾ ವಿಷಯವನ್ನಾಗಿ ಅಭ್ಯಸಿಸಿ ಅರ್ಹತಾ ಪರೀಕ್ಷೆಯ ಪಿಸಿಬಿ ವಿಷಯಗಳಲ್ಲಿ ಒಟ್ಟಾರೆ ಕನಿಷ್ಠ ಶೇಕಡ 50ರಷ್ಟು ಅಂಕಗಳನ್ನು ಪಡೆದು ತೇರ್ಗಡೆ ಹೊಂದಿರಬೇಕು. (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಾದ ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ ಗಳಿಗೆ ಸೇರಿರುವ ಅಭ್ಯರ್ಥಿಗಳು ಶೇ. 40%). | ಇಂತಿಷ್ಟೇ ಅಂಕಗಳನ್ನು ಪಡೆಯಬೇಕೆಂಬ ನಿಯಮವಿರುವುದಿಲ್ಲ. | ಸಾಮಾನ್ಯ ಪ್ರವೇಶ ಪರೀಕ್ಷೆ ಮತ್ತು ಅರ್ಹತಾ ಪರೀಕ್ಷೆಗಳಲ್ಲಿ ಪಿಸಿಬಿ ವಿಷಯಗಳಲ್ಲಿ ಪಡೆದಿರುವ ಒಟ್ಟು ಅಂಕಗಳನ್ನು ಸಮಾನವಾಗಿ ಗಣನೆಗೆ ತೆಗೆದುಕೊಂಡು ರ್‍ಯಾಂಕ್ ಪ್ರಕಟಿಸಲಾಗುವುದು. |
| 3. | ಇಂಜಿನಿಯರಿಂಗ್ / ಟೆಕ್ನಾಲಜಿ (ಬಿ.ಇ. / ಬಿ.ಟೆಕ್.) | ಕರ್ನಾಟಕದ ಎರಡನೇ ಪಿಯುಸಿ / 12ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ಭೌತಶಾಸ್ತ್ರ, ಗಣಿತ ವಿಷಯಗಳ ಜೊತೆಗೆ ರಸಾಯನಶಾಸ್ತ್ರ / ಬಯೋ–ಟೆಕ್ನಾಲಜಿ / ಜೀವಶಾಸ್ತ್ರ / ಎಲೆಕ್ಟ್ರಾನಿಕ್ಸ್ / ಕಂಪ್ಯೂಟರ್ ಸೈನ್ಸ್‌ಗಳಲ್ಲಿ ಯಾವುದಾದರೂ ಒಂದನ್ನು ಐಚ್ಛಿಕ ವಿಷಯವನ್ನಾಗಿ ಹಾಗೂ ಇಂಗ್ಲೀಷನ್ನು ಒಂದು ಭಾಷಾ ವಿಷಯವನ್ನಾಗಿ ತೆಗೆದುಕೊಂಡು, ಅರ್ಹತಾ ಪರೀಕ್ಷೆಯ ಐಚ್ಛಿಕ ವಿಷಯಗಳಲ್ಲಿ ಒಟ್ಟಾರೆ ಕನಿಷ್ಠ ಶೇಕಡ 45ರಷ್ಟು ಅಂಕಗಳನ್ನು ಪಡೆದು ತೇರ್ಗಡೆ ಹೊಂದಿರಬೇಕು. (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಾದ ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ ಗಳಿಗೆ ಸೇರಿರುವ ಅಭ್ಯರ್ಥಿಗಳು ಶೇ. 40%). | ಇಂತಿಷ್ಟೇ ಅಂಕಗಳನ್ನು ಪಡೆಯಬೇಕೆಂಬ ನಿಯಮವಿರುವುದಿಲ್ಲ. | ಸಾಮಾನ್ಯ ಪ್ರವೇಶ ಪರೀಕ್ಷೆ ಮತ್ತು ಅರ್ಹತಾ ಪರೀಕ್ಷೆಗಳಲ್ಲಿ ಪಿಸಿಎಂ ವಿಷಯಗಳಲ್ಲಿ ಪಡೆದಿರುವ ಒಟ್ಟು ಅಂಕಗಳನ್ನು ಸಮಾನವಾಗಿ ಗಣನೆಗೆ ತೆಗೆದುಕೊಂಡು ರ್‍ಯಾಂಕ್ ಪ್ರಕಟಿಸಲಾಗುವುದು. |
| 4. | ಆರ್ಕಿಟೆಕ್ಚರ್ (ಬಿ.ಆರ್ಕ್.) | ಕರ್ನಾಟಕದ ಎರಡನೇ ಪಿಯುಸಿ / 12ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ಗಣಿತವನ್ನು ಐಚ್ಛಿಕ ವಿಷಯವನ್ನಾಗಿ ಅಭ್ಯಸಿಸಿ ಅರ್ಹತಾ ಪರೀಕ್ಷೆಯ ಎಲ್ಲಾ ವಿಷಯಗಳಲ್ಲಿ ಒಟ್ಟಾರೆ ಕನಿಷ್ಠ ಶೇಕಡ 50ರಷ್ಟು (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಾದ ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ ಹಾಗೂ ಅಂಗವಿಕಲ ಅಭ್ಯರ್ಥಿಗಳು (ಡಿಸ್‌ಲೆಕ್ಸಿಯಾ ಪ್ರಕರಣಗಳೂ ಸೇರಿ) ಶೇಕಡ 45ರಷ್ಟು) ಅಂಕಗಳನ್ನು ಪಡೆದು ತೇರ್ಗಡೆ ಹೊಂದಿರಬೇಕು. | NATA ಪರೀಕ್ಷೆಗೆ ಹಾಜರಾಗಿ ಕನಿಷ್ಠ ಶೇಕಡ 40ರಷ್ಟು ಅಂಕಗಳನ್ನು ಪಡೆದಿರಬೇಕು. (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿಗಳಿಗೆ ಅಭ್ಯರ್ಥಿಗಳೂ ಸೇರಿದಂತೆ) | ಅಭ್ಯರ್ಥಿಗಳು NATA ಪರೀಕ್ಷೆ ಮತ್ತು ಅರ್ಹತಾ ಪರೀಕ್ಷೆಗಳಲ್ಲಿ ಪಡೆದಿರುವ ಒಟ್ಟು ಅಂಕಗಳನ್ನು ಸಮಾನವಾಗಿ ಗಣನೆಗೆ ತೆಗೆದುಕೊಂಡು, ರ್‍ಯಾಂಕ್ ಪ್ರಕಟಿಸಲಾಗುವುದು. |
| | | ಸೂಚನೆ: ಆರ್ಕಿಟೆಕ್ಚರ್ ಕೋರ್ಸ್‌ನ ಪ್ರವೇಶಕ್ಕಾಗಿ ಕೌನ್ಸಿಲ್ ಆಫ್ ಆರ್ಕಿಟೆಕ್ಚರ್ ರವರು ನಡೆಸುವ **NATA (National Aptitude Test in Architecture)** ಪರೀಕ್ಷೆಗೆ ಹಾಜರಾಗಬೇಕು. NATA ಪರೀಕ್ಷೆಗೆ ಹಾಜರಾಗಲು ಕೊನೆಯ ದಿನಾಂಕ 20–05–2016 ಹಾಗು NATA ಸ್ಕೋರ್ ಕಾರ್ಡ್ ಅನ್ನು ಪ್ರಾಧಿಕಾರಕ್ಕೆ ಸಲ್ಲಿಸಲು ಕೊನೆಯ ದಿನಾಂಕ 24–05–2016. (ಕರ್ನಾಟಕದಲ್ಲಿ ನಾಟಾ ಪರೀಕ್ಷೆ ನಡೆಸುವ ಸಂಸ್ಥೆಗಳ ವಿವರಗಳನ್ನು ಕೆಇಎ ವೆಬ್‌ಸೈಟ್‌ನಲ್ಲಿ ನೀಡಿದೆ). | | |
| 5. | ಬಿ.ಎಸ್‌ಸಿ. (ಕೃಷಿ), ಬಿ.ಎಸ್‌ಸಿ. (ಫಾರೆಸ್ಟ್ರಿ), ಬಿ.ಎಸ್‌ಸಿ. (ಸಿರಿಕಲ್ಚರ್) ಬಿ.ಎಸ್‌ಸಿ. (ಅಗ್ರಿ ಬಯೋಟೆಕ್), ಬಿ.ಎಸ್‌ಸಿ. (ತೋಟಗಾರಿಕೆ), ಬಿ.ಹೆಚ್.ಎಸ್‌ಸಿ. (ಗೃಹ ವಿಜ್ಞಾನ), ಬಿ.ಟೆಕ್ (ಫುಡ್ ಟೆಕ್ನಾಲಜಿ), ಬಿ.ಟೆಕ್ (ಡೈರಿ ಟೆಕ್ನಾಲಜಿ) ಬಿ.ಎಫ್.ಎಸ್‌ಸಿ. (ಫಿಶರಿ ಸೈನ್ಸ್), ಬಿ.ಟೆಕ್ (ಫುಡ್ ಸೈನ್ಸ ಅಂಡ್ ಟೆಕ್ನಾಲಜಿ) ಬಿ.ಎಸ್. ಸಿ (ಅಗ್ರಿ ಮಾರ್ಕೆಟಿಂಗ್ ಮತ್ತು ಕೋಆಪರೇಶನ್), ಬಿ.ಟೆಕ್ (ಅಗ್ರಿಕಲ್ಚರ್ ಇಂಜಿನಿಯರಿಂಗ್) | ಕರ್ನಾಟಕದ ಎರಡನೇ ಪಿಯುಸಿ / 12ನೇ ತರಗತಿ ಪರೀಕ್ಷೆಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಮತ್ತು ಜೀವಶಾಸ್ತ್ರಗಳನ್ನು ಐಚ್ಛಿಕ ವಿಷಯಗಳನ್ನು ಅಭ್ಯಸಿಸಿ ತೇರ್ಗಡೆ ಹೊಂದಿರಬೇಕು. | ಇಂತಿಷ್ಟೇ ಅಂಕಗಳನ್ನು ಪಡೆಯಬೇಕೆಂಬ ನಿಯಮವಿರುವುದಿಲ್ಲ. | ಸಾಮಾನ್ಯ ಪ್ರವೇಶ ಪರೀಕ್ಷೆ ಮತ್ತು ಅರ್ಹತಾ ಪರೀಕ್ಷೆಗಳಲ್ಲಿ ಪಿಸಿಎಂಬಿ ವಿಷಯಗಳಲ್ಲಿ ಪಡೆದಿರುವ ಒಟ್ಟು ಅಂಕಗಳನ್ನು ಸಮಾನವಾಗಿ ಗಣನೆಗೆ ತೆಗೆದುಕೊಂಡು ರ್‍ಯಾಂಕ್ ಪ್ರಕಟಿಸಲಾಗುವುದು. |
| 6. | ಪಶು ವೈದ್ಯಕೀಯ ಮತ್ತು ಪಶುಸಂಗೋಪನೆ (ಬಿ.ವಿ.ಎಸ್‌ಸಿ & ಎ ಹೆಚ್) | ಕರ್ನಾಟಕದ ಎರಡನೇ ಪಿಯುಸಿ / 12ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಇಂಗ್ಲೀಷನ್ನು ಅಭ್ಯಸಿಸಿ ಒಟ್ಟಾರೆ ಕನಿಷ್ಠ ಶೇಕಡ 50ರಷ್ಟು ಅಂಕಗಳನ್ನು ಪಡೆದು ತೇರ್ಗಡೆ ಹೊಂದಿರಬೇಕು. (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಾದ ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿಗಳಿಗೆ ಸೇರಿರುವ ಅಭ್ಯರ್ಥಿಗಳು ಶೇ. 40%) | ಇಂತಿಷ್ಟೇ ಅಂಕಗಳನ್ನು ಪಡೆಯಬೇಕೆಂಬ ನಿಯಮವಿರುವುದಿಲ್ಲ. | ಸಾಮಾನ್ಯ ಪ್ರವೇಶ ಪರೀಕ್ಷೆಯ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ ವಿಷಯಗಳಲ್ಲಿ ಪಡೆದಿರುವ ಒಟ್ಟು ಅಂಕಗಳನ್ನು ಆಧರಿಸಿ, ರ್‍ಯಾಂಕ್ ಪ್ರಕಟಿಸಲಾಗುವುದು. |
| 7. | ಬಿ–ಫಾರ್ಮ | ಕರ್ನಾಟಕದ ಎರಡನೇ ಪಿಯುಸಿ / 12ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ ಅಥವಾ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ ವಿಷಯಗಳಲ್ಲಿ ಅರ್ಹತಾ ಪರೀಕ್ಷೆಯ ಐಚ್ಛಿಕ ವಿಷಯಗಳಲ್ಲಿ ಒಟ್ಟಾರೆ ಕನಿಷ್ಠ ಶೇಕಡ 45ರಷ್ಟು ಅಂಕಗಳನ್ನು ಪಡೆದು ತೇರ್ಗಡೆ ಹೊಂದಿರಬೇಕು. (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಾದ ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ ಗಳಿಗೆ ಸೇರಿರುವ ಅಭ್ಯರ್ಥಿಗಳು ಶೇ. 40%). ಅಥವಾ ಸೆಕ್ಷನ್ 12 ರ ಫಾರ್ಮಸಿ ಕಾಯಿದೆಯಡಿಯಲ್ಲಿ ಭಾರತೀಯ ಫಾರ್ಮಸಿ ಮಂಡಳಿಯಿಂದ ಮಾನ್ಯತೆ ಪಡೆದ ಸಂಸ್ಥೆಯಲ್ಲಿ ಡಿಪ್ಲೊಮ ಇನ್ ಫಾರ್ಮಸಿಯಲ್ಲಿ ಕನಿಷ್ಠ ಶೇ 45 ರಷ್ಟು ಅಂಕಗಳೊಂದಿಗೆ ತೇರ್ಗಡೆ ಹೊಂದಿರಬೇಕು. (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಾದ ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ ಗಳಿಗೆ ಸೇರಿರುವ ಅಭ್ಯರ್ಥಿಗಳು ಶೇ. 40%) | ಇಂತಿಷ್ಟೇ ಅಂಕಗಳನ್ನು ಪಡೆಯಬೇಕೆಂಬ ನಿಯಮವಿರುವುದಿಲ್ಲ. | ಸಾಮಾನ್ಯ ಪ್ರವೇಶ ಪರೀಕ್ಷೆಯ ಪಿಸಿಎಂ ಅಥವಾ ಪಿಸಿಬಿ ವಿಷಯಗಳಲ್ಲಿ ಪಡೆದಿರುವ ಒಟ್ಟು ಅಂಕಗಳನ್ನು ಗಣನೆಗೆ ತೆಗೆದುಕೊಂಡು ರ್‍ಯಾಂಕ್ ಪ್ರಕಟಿಸಲಾಗುವುದು (ಯಾವುದು ಹೆಚ್ಚಾಗಿರುವುದೋ ಅದು) |
| 8. | 2ನೇ ವರ್ಷದ ಬಿ–ಫಾರ್ಮ | ಸೆಕ್ಷನ್ 12 ರ ಫಾರ್ಮಸಿ ಕಾಯಿದೆಯಡಿಯಲ್ಲಿ ಭಾರತೀಯ ಫಾರ್ಮಸಿ ಮಂಡಳಿಯಿಂದ ಮಾನ್ಯತೆ ಪಡೆದ ಸಂಸ್ಥೆಯಲ್ಲಿ ಡಿಪ್ಲೊಮ ಇನ್ ಫಾರ್ಮಸಿಯಲ್ಲಿ ಕನಿಷ್ಠ ಶೇ 45 ರಷ್ಟು ಅಂಕಗಳೊಂದಿಗೆ ತೇರ್ಗಡೆ ಹೊಂದಿರಬೇಕು. (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಾದ ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ ಗಳಿಗೆ ಸೇರಿರುವ ಅಭ್ಯರ್ಥಿಗಳು ಶೇ. 40%) | ಇಂತಿಷ್ಟೇ ಅಂಕಗಳನ್ನು ಪಡೆಯಬೇಕೆಂಬ ನಿಯಮವಿರುವುದಿಲ್ಲ. | ಸಾಮಾನ್ಯ ಪ್ರವೇಶ ಪರೀಕ್ಷೆಯ ಪಿಸಿಎಂ ಅಥವಾ ಪಿಸಿಬಿ ವಿಷಯಗಳಲ್ಲಿ ಪಡೆದಿರುವ ಒಟ್ಟು ಅಂಕಗಳನ್ನು ಗಣನೆಗೆ ತೆಗೆದುಕೊಂಡು ರ್‍ಯಾಂಕ್ ಪ್ರಕಟಿಸಲಾಗುವುದು (ಯಾವುದು ಹೆಚ್ಚಾಗಿರುವುದೋ ಅದು) |
| 9. | ಫಾರ್ಮ–ಡಿ | ಕರ್ನಾಟಕದ ಎರಡನೇ ಪಿಯುಸಿ / 12ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ ಅಥವಾ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ ವಿಷಯಗಳಲ್ಲಿ ಅಥವಾ ಡಿಪ್ಲೊಮ ಇನ್ ಫಾರ್ಮಸಿಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. | ಇಂತಿಷ್ಟೇ ಅಂಕಗಳನ್ನು ಪಡೆಯಬೇಕೆಂಬ ನಿಯಮವಿರುವುದಿಲ್ಲ. | ಸಾಮಾನ್ಯ ಪ್ರವೇಶ ಪರೀಕ್ಷೆಯ ಪಿಸಿಎಂ ಅಥವಾ ಪಿಸಿಬಿ ವಿಷಯಗಳಲ್ಲಿ ಪಡೆದಿರುವ ಒಟ್ಟು ಅಂಕಗಳನ್ನು ಗಣನೆಗೆ ತೆಗೆದುಕೊಂಡು ರ್‍ಯಾಂಕ್ ಪ್ರಕಟಿಸಲಾಗುವುದು (ಯಾವುದು ಹೆಚ್ಚಾಗಿರುವುದೋ ಅದು) |

ಮುಖ್ಯ ಸೂಚನೆ:

(i) ನಿಯಮ 15 (5) ರ **Karnataka Selection of Candidates for Admission to Government seats in Professional Educational Institutions Rules, 2006**, ರ ಅನ್ವಯ ಕ.ಪ.ಪ್ರಾ (ಸಿಇಟಿ ಸೆಲ್) ಮೂಲಕ ಈ ಹಿಂದಿನ ವರ್ಷಗಳಲ್ಲಿ ಯಾವುದಾದರೂ ವಿಭಾಗದಲ್ಲಿ ಸೀಟನ್ನು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಈ ಬಾರಿ ಅದೇ ವಿಭಾಗದಲ್ಲಿ ಸೀಟನ್ನು ಆಯ್ಕೆಮಾಡಿಕೊಳ್ಳಲು ಸಾಮಾನ್ಯ ಪ್ರವೇಶ ಪರೀಕ್ಷೆ–2016ಕ್ಕೆ ಹಾಜರಾಗಲು ಅರ್ಹರಿರುವುದಿಲ್ಲ. ಅಂತಹ ಅಭ್ಯರ್ಥಿಗಳು ಈ ವರ್ಷ ಬೇರೆ ವಿಭಾಗಗಳಲ್ಲಿ ಸೀಟನ್ನು ಆಯ್ಕೆ ಮಾಡಿಕೊಂಡಲ್ಲಿ ಅವರು ಹಿಂದಿನ ವರ್ಷಗಳಲ್ಲಿ ಆಯ್ಕೆಮಾಡಿಕೊಂಡಿದ್ದ ಸೀಟನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

(ii) ಹೊರನಾಡು ಮತ್ತು ಗಡಿನಾಡು ಅಭ್ಯರ್ಥಿಗಳಿಗೆ ಪ್ರಾಧಿಕಾರವು 50 ಅಂಕಗಳಿಗೆ ನಡೆಸುವ ಕನ್ನಡ ಭಾಷಾ ಪರೀಕ್ಷೆಯಲ್ಲಿ ಕನಿಷ್ಠ 12 ಅಂಕಗಳನ್ನು ಪಡೆಯುವ ಅಭ್ಯರ್ಥಿಗಳನ್ನು ಮಾತ್ರ ಸಿಇಟಿ–2016ರ ರ್‍ಯಾಂಕ್ ನೀಡಲು ಮತ್ತು ಸೀಟು ಆಯ್ಕೆಗೆ ಪರಿಗಣಿಸಲಾಗುವುದು. (4ನೇ ತರಗತಿಗೆ ಬೋಧಿಸಲು ನಿಗದಿ ಪಡಿಸಿರುವ ಭಾಷಾ ವಿಷಯದ ಮಟ್ಟವನ್ನು ಕನ್ನಡ ಭಾಷಾ ಪರೀಕ್ಷೆಗೆ ಅಳವಡಿಸಿಕೊಳ್ಳಲಾಗುವುದು)

(iii) ಕೃಷಿಕ ಕುಟುಂಬ ಅಭ್ಯರ್ಥಿಗಳ ಕೋಟದ ಅಡಿ ಕೃಷಿ ವಿಜ್ಞಾನ / ತೋಟಗಾರಿಕೆ ಕೋರ್ಸುಗಳ ಪ್ರವೇಶಕ್ಕೆ ಮೆರಿಟ್ ಪಟ್ಟಿಯನ್ನು ಅಭ್ಯರ್ಥಿಯ ಅರ್ಹತಾ ಪರೀಕ್ಷೆ ಮತ್ತು ಸಿಇಟಿ ಪರೀಕ್ಷೆಯ ಐಚ್ಛಿಕ ವಿಷಯಗಳಲ್ಲಿ ತಲಾ ಶೇ.25% ರಷ್ಟು ಅಂಕಗಳನ್ನು ಮತ್ತು ಪ್ರಾಯೋಗಿಕ ಪರೀಕ್ಷೆಯ ಶೇ.50% ರಷ್ಟು ಅಂಕಗಳನ್ನು ಗಣನೆಗೆ ತೆಗೆದುಕೊಂಡು ರ್‍ಯಾಂಕ್ ನಿಗದಿಪಡಿಸಲಾಗುವುದು. ಬಿ.ವಿ.ಎಸ್.ಸಿ ಅಂಡ್ ಎಹೆಚ್ ಕೋರ್ಸುಗಳಿಗೆ ಅಭ್ಯರ್ಥಿಯು ಸಿಇಟಿ ಪರೀಕ್ಷೆಯ ಪಿಸಿಬಿ ವಿಷಯಗಳಲ್ಲಿ ಮತ್ತು ಪ್ರಾಯೋಗಿಕ ಪರೀಕ್ಷೆಯಲ್ಲಿ ಪಡೆಯುವ ಅಂಕಗಳನ್ನು ಸಮಾನವಾಗಿ ಪರಿಗಣಿಸಿ ರ್‍ಯಾಂಕ್ ಪಟ್ಟಿ ನಿರ್ಧರಿಸಲಾಗುವುದು.

3. ಅರ್ಜಿ ಸಲ್ಲಿಸುವ ವಿಧಾನ

| | |
|---|---|
| ಹಂತ –1 | ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಮೊದಲು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಿಂದ ಇ–ಬ್ರೋಚರ್ ಅನ್ನು ಡೌನ್‌ಲೋಡ್ ಮಾಡಿ ಅದರಲ್ಲಿ ನೀಡಿರುವ ಸೂಚನೆಗಳನ್ನು ಓದಿಕೊಂಡು ನಂತರ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ತೋರಿಸಿರುವ CET-2016 UG Online Application ಲಿಂಕ್ ಅನ್ನು ಆಯ್ಕೆ ಮಾಡಿ ಆನ್ ಲೈನ್ ಮುಖಾಂತರ ಅರ್ಜಿಯನ್ನು ಭರ್ತಿಮಾಡಬೇಕು. ಅರ್ಜಿಯನ್ನು ಸಂಪೂರ್ಣವಾಗಿ ಭರ್ತಿ ಮಾಡಿದ ನಂತರ ಅಭ್ಯರ್ಥಿಗಳು ನಮೂದಿಸಿರುವ ಮೊಬೈಲ್ ಸಂಖ್ಯೆಗೆ ಹಾಗು ಇ–ಮೇಲ್ ವಿಳಾಸಕ್ಕೆ application ID and Password ಅನ್ನು ಕಳುಹಿಸಿಕೊಡಲಾಗುತ್ತದೆ ಹಾಗೂ ಪರದೆಯ ಮೇಲೂ ಸಹ ತೋರಿಸಲಾಗುತ್ತದೆ. |
| ಹಂತ –2 | ಸ್ಕ್ಯಾನ್ ಮಾಡಿರುವ ಅಭ್ಯರ್ಥಿಯ ಭಾವಚಿತ್ರ, ರುಜು ಮತ್ತು ಎಡಗೈ ಹೆಬ್ಬರಳ ಗುರುತನ್ನು Upload ಮಾಡಬೇಕು. (JPEG / JPG Format) |
| ಹಂತ –3 | ನಂತರ ಅದೇ ವೆಬ್ ಸೈಟ್‌ನಿಂದಲೇ ಮೂರು ಪ್ರತಿಯುಳ್ಳ ಚಲನ್ ಅನ್ನು ಡೌನ್ ಲೋಡ್ ಮಾಡಿಕೊಳ್ಳಬೇಕು / ಪ್ರಿಂಟ್ ತೆಗೆದುಕೊಳ್ಳಬೇಕು. ಚಲನ್ ನಲ್ಲಿ ಅಭ್ಯರ್ಥಿಯ ಎಲ್ಲಾ ವಿವರಗಳು ಅಂದರೆ, ಅಭ್ಯರ್ಥಿಯ ಹೆಸರು, ಅಭ್ಯರ್ಥಿಯು ಪಾವತಿಸಬೇಕಾದ ಶುಲ್ಕ, ಬ್ಯಾಂಕ್ ಖಾತೆ ಸಂಖ್ಯೆ ಇವೆಲ್ಲವನ್ನೂ ಮುದ್ರಿಸಲಾಗಿರುತ್ತದೆ. ನಂತರ ನಿಗದಿಪಡಿಸಿರುವ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ನಿಗದಿತ ಶುಲ್ಕವನ್ನು ಪಾವತಿಸಬೇಕು. ಕರ್ನಾಟಕದ ಅಭ್ಯರ್ಥಿಗಳು ರೂ.650/– (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1ಕ್ಕೆ ಸೇರಿರುವ ಅಭ್ಯರ್ಥಿಗಳು ರೂ. 500/–) ಕರ್ನಾಟಕದ ಹೊರಗಿನ ಅಭ್ಯರ್ಥಿಗಳು ರೂ. 750/– ಹಾಗೂ ಭಾರತದ ಹೊರಗಡೆ ವಾಸಿಸುತ್ತಿರುವ ಕರ್ನಾಟಕದ ಅಭ್ಯರ್ಥಿಗಳು ರೂ.5,000/– ಅನ್ನು ಪಾವತಿಸಬೇಕು ಬ್ಯಾಂಕಿನವರು ಶುಲ್ಕವನ್ನು ತೆಗೆದುಕೊಂಡ ನಂತರ ಬ್ಯಾಂಕ್ ಪ್ರತಿಯನ್ನು ತಮ್ಮೊಡನೆ ಇಟ್ಟುಕೊಂಡು, ವಿದ್ಯಾರ್ಥಿ ಪ್ರತಿ ಮತ್ತು ಕೆಇಎ ಪ್ರತಿ ಯನ್ನು ಹಿಂದಿರುಗಿಸುತ್ತಾರೆ. |
| ಹಂತ –4 | ನಂತರ ಭರ್ತಿ ಮಾಡಿದ ಅರ್ಜಿಯನ್ನು ಎ–4 ಸೈಜಿನ ಪೇಪರಿನಲ್ಲಿ ಪ್ರಿಂಟ್ ತೆಗೆದುಕೊಳ್ಳಬೇಕು. ತಾವು 2ನೇ ಪಿಯುಸಿ / 12ನೇ ತರಗತಿ / ತತ್ಸಮಾನ ತರಗತಿಯನ್ನು ಅಭ್ಯಸಿಸುತ್ತಿರುವ ಕಾಲೇಜಿನ ಪ್ರಿನ್ಸಿಪಾಲರಿಂದ ಅರ್ಜಿಯಲ್ಲಿ ನಿಗದಿಪಡಿಸಿರುವ ಸ್ಥಳದಲ್ಲಿ ದೃಢೀಕರಿಸಬೇಕು. ನಂತರ ದಾಖಲಾತಿ ಪರಿಶೀಲನೆಯ ಸಮಯದಲ್ಲಿ ಅರ್ಜಿಯನ್ನು ಸಲ್ಲಿಸಬೇಕು. |

ಸೂಚನೆ: ಅಭ್ಯರ್ಥಿಯು **application ID and Password** ಅನ್ನು ಅರ್ಜಿ ಸಲ್ಲಿಸುವವರೆಗೂ ಬರೆದಿಟ್ಟುಕೊಳ್ಳಬೇಕು. ಅಭ್ಯರ್ಥಿಯು ಅರ್ಜಿಯಲ್ಲಿ ಎಲ್ಲಾ ಮಾಹಿತಿಗಳನ್ನು ಭರ್ತಿ ಮಾಡಬೇಕು. ಸಂಪೂರ್ಣವಾಗಿ ಭರ್ತಿ ಮಾಡದೇ ಇರುವ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ. ಹಾಗೆಯೇ ಭಾವಚಿತ್ರ, ರುಜು ಮತ್ತು ಎಡಗೈ ಹೆಬ್ಬರಳ ಗುರುತನ್ನು ಸಲ್ಲಿಸದೇ ಇರುವ ಅರ್ಜಿಗಳನ್ನೂ ಸಹ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಅಭ್ಯರ್ಥಿಗಳು ಘೋಷಣೆ / ಅಂತಿಮ ಪ್ರಿಂಟ್ ಅನ್ನು ತೆಗದುಕೊಂಡ ನಂತರ ಅರ್ಜಿಯಲ್ಲಿನ ಮಾಹಿತಿಗಳನ್ನು ಬದಲಾಯಿಸಲು ಸಾಧ್ಯವಿರುವುದಿಲ್ಲ.

| | |
|---|---|
| ಆನ್‌ಲೈನ್ ಮುಖಾಂತರ ಅರ್ಜಿ ಭರ್ತಿ ಮಾಡಲು ಪ್ರಾರಂಭಿಕ ದಿನಾಂಕ | 13–01–2016 |
| ಆನ್‌ಲೈನ್ ಮುಖಾಂತರ ಅರ್ಜಿ ಭರ್ತಿ ಮಾಡಲು ಕೊನೆಯ ದಿನಾಂಕ | 13–02–2016 |
| ಬ್ಯಾಂಕುಗಳಲ್ಲಿ ಶುಲ್ಕವನ್ನು ಪಾವತಿ ಮಾಡಲು ಕೊನೆಯ ದಿನಾಂಕ | 15–02–2016 |
| ಪ್ರವೇಶ ಪತ್ರಗಳನ್ನು ಡೌನ್‌ಮಾಡಿಕೊಳ್ಳಲು | 15–04–2016 ರ ನಂತರ |

- 2016ನೇ ಸಾಲಿನ ಕರ್ನಾಟಕ ರಾಜ್ಯದಲ್ಲಿನ ವೃತ್ತಿ ಶಿಕ್ಷಣ ಕೋರ್ಸುಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಸುವ ಮೊದಲು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ನೀಡಲಾಗಿರುವ ಅರ್ಹತೆಯ ಪರಿಚ್ಛೇಧಗಳನ್ನು (Eligibility Clauses) ಓದಿಕೊಂಡು ಅಭ್ಯರ್ಥಿಯ ಅರ್ಹತೆಯ ಬಗ್ಗೆ ಖಾತ್ರಿ ಪಡಿಸಿಕೊಂಡ ನಂತರ ಮಾತ್ರ ಅರ್ಜಿ ಸಲ್ಲಿಸುವುದು.ಯಾವುದೇ ಕಾರಣಕ್ಕೂ ಒಮ್ಮೆ ಪಾವತಿಸಿದ ಶುಲ್ಕವನ್ನು ವಾಪಸ್ಸು ಮಾಡಲಾಗುವುದಿಲ್ಲ.
- ಸಿಇಟಿ 2016ರ ಆನ್ ಲೈನ್ ಮುಖಾಂತರ ಅರ್ಜಿಯಲ್ಲಿ ಅಭ್ಯರ್ಥಿಗಳು ನೀಡುವ ಎಲ್ಲ ಮಾಹಿತಿಗಳನ್ನೂ ಅಂತಿಮವೆಂದು ಪರಿಗಣಿಸಲಾಗುತ್ತದೆ. ಸಿಇಟಿ–2016 ರ ಅರ್ಜಿ ನಮೂನೆಯಲ್ಲಿ ಜಾತಿ / ವರ್ಗ ಮತ್ತು ವಾರ್ಷಿಕ ಆದಾಯದ ಬಗ್ಗೆ ಒದಗಿಸಿರುವ ಮಾಹಿತಿಯ ವಿದ್ಯಾರ್ಥಿಗಳಿಗೆ ರ್‍ಯಾಂಕ್ ನೀಡುವುದಕ್ಕೆ / ಸೀಟು ಹಂಚಿಕೆ ಮಾಡುವುದಕ್ಕೆ ಪರಿಗಣಿಸಲಾಗುವುದು ಮತ್ತು ಯಾವುದೇ ಕಾರಣಕ್ಕೂ ಅರ್ಜಿಯಲ್ಲಿ ಬರೆದಿರುವ ಜಾತಿ / ವರ್ಗ ಮತ್ತು ವಾರ್ಷಿಕ ವರಮಾನವನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.

### ಆನ್‌ಲೈನ್ ಸೀಟು ಹಂಚಿಕೆ ಬಗ್ಗೆ ಟಿಪ್ಪಣಿ

4. ಸಿಇಟಿ–2016ರ ಮೆರಿಟ್ ಆಧಾರದ ಮೇಲೆ ಮೇಲೆ ತಿಳಿಸಿರುವ ಕೋರ್ಸುಗಳಿಗೆ ಅರ್ಹ ಅಭ್ಯರ್ಥಿಗಳು ದಾಖಲಿಸುವ ಇಚ್ಛೆ / ಆಯ್ಕೆಯನ್ನು ಪಡೆದು ಸೀಟು ಹಂಚಿಕೆಯನ್ನು ಮಾಡಲಾಗುವುದು.
5. ಪ್ರಸಕ್ತ ಸಾಲಿನಿಂದ ದಾಖಲೆ ಪರಿಶೀಲನೆಯನ್ನು ಆನ್‌ಲೈನ್ ಮುಖಾಂತರ ಕೈಗೊಳ್ಳಲು ಪ್ರಾಧಿಕಾರವು ಯೋಜಿಸುತ್ತಿದೆ ಇಲ್ಲವಾದಲ್ಲಿ ಫಲಿತಾಂಶ ಪ್ರಕಟಣೆಯ ನಂತರ ಅಭ್ಯರ್ಥಿಗಳ ದಾಖಲೆಗಳನ್ನು ರಾಜ್ಯದಾದ್ಯಂತ ಸ್ಥಾಪಿಸಲಾಗುವ ಸುಮಾರು 13 ಸಹಾಯಕ ಕೇಂದ್ರಗಳಲ್ಲಿ ಪರಿಶೀಲಿಸಲಾಗುವುದು. ದಾಖಲೆಗಳ ಪರಿಶೀಲನೆ ಹಾಗೂ ಪರಿಶೀಲನಾ ಪತ್ರ ನೀಡಿದ ನಂತರ ಅಭ್ಯರ್ಥಿಗಳಿಗೆ ಅವರ ಸೀಟು ಆಯ್ಕೆ ಇಚ್ಛೆಯನ್ನು ಕಂಪ್ಯೂಟರ್‌ನಲ್ಲಿ ದಾಖಲಿಸಲು ಅವಕಾಶ ಕಲ್ಪಿಸಲಾಗುವುದು. ಅಭ್ಯರ್ಥಿಗಳು ಅವರ ಇಚ್ಛಾನುಸಾರ ಎಷ್ಟು ಬೇಕಾದರೂ ಆಯ್ಕೆಯನ್ನು / ಕಾಲೇಜು / ಕೋರ್ಸನ್ನು ಅವರಾಗಿ ಮಾಡಿಕೊಳ್ಳಬಹುದಾದ ವಿಧಾನದ ಮೂಲಕ ದಾಖಲಿಸಬಹುದು. ಅಭ್ಯರ್ಥಿಗಳು ತಾವು ದಾಖಲಿಸುವ ಆಯ್ಕೆಯನ್ನು ಪ್ರಿಂಟ್ ಮಾಡಿಕೊಳ್ಳಬಹುದು. ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಲಾಗಿನ್ ಮತ್ತು ಪಾಸ್‌ವರ್ಡ್‌ಗಳನ್ನು ನೀಡಲಾಗುವುದು ಮತ್ತು ಅವರುಗಳು ಅಗತ್ಯಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಳ್ಳಬಹುದು. ಸಹಾಯಕ ಕೇಂದ್ರಗಳ ವಿವರಗಳನ್ನು ಸಿಇಟಿ – 2016 ರ ಬ್ರೋಚರ್‌ನಲ್ಲಿ ಹಾಗೂ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ನೀಡಲಾಗುವುದು.
6. ಸರ್ಕಾರವು ನೀಡುವ ಸೀಟ್ ಮ್ಯಾಟ್ರಿಕ್ಸ್ ನಂತೆ ಆಯಾ ಕಾಲೇಜುಗಳಲ್ಲಿ ಲಭ್ಯವಿರುವ ಸೀಟುಗಳನ್ನು ಅಭ್ಯರ್ಥಿಗಳ ಸಿಇಟಿ ರ್‍ಯಾಂಕ್ ಹಾಗೂ ಇಚ್ಛೆ / ಆಯ್ಕೆ ಅನುಗುಣವಾಗಿ ಕಾಲೇಜು / ಕೋರ್ಸನ್ನು ಕಂಪ್ಯೂಟರ್ ಹಂಚಿಕೆ ಮಾಡುತ್ತದೆ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಸಿಇಟಿ – 2016 ರ ಬ್ರೋಚರ್‌ನಲ್ಲಿ ನೋಡಬಹುದು ಹಾಗೂ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in. ನಲ್ಲಿ ನೀಡಲಾಗುವುದು.
7. ಹೊರನಾಡು, ಗಡಿನಾಡು, ಜಮ್ಮು ಮತ್ತು ಕಾಶ್ಮೀರಿ ವಲಸಿಗರು ಹಾಗೂ ಎಲ್ಲಾ ವಿಶೇಷ ಪ್ರವರ್ಗಗಳು ಅಂದರೆ ಎನ್.ಸಿ.ಸಿ., ಕ್ರೀಡೆ, ವಿಕಲಚೇತನರು, ಆಂಗ್ಲೋ ಇಂಡಿಯನ್, ಸೈನಿಕರು, ಮಾಜಿಸೈನಿಕರು, ಸಿಎಪಿಎಫ್ ಮತ್ತು ಸ್ಕೌಟ್ಸ್ ಅಂಡ್ ಗೈಡ್ಸ್ ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆಯನ್ನು ಪ್ರಾಧಿಕಾರದ ಬೆಂಗಳೂರು ಕಚೇರಿಯಲ್ಲಿ ಮಾತ್ರ ನಡೆಸಲಾಗುವುದು.

### ಸಾಮಾನ್ಯ ಪ್ರವೇಶ ಪರೀಕ್ಷೆ – 2016ರ ವೇಳಾಪಟ್ಟಿ

| ದಿನಾಂಕ | ದಿನ | ಸಮಯ | ವಿಷಯ | ಅಂಕಗಳು |
|---|---|---|---|---|
| 04–05–2016 | ಬುಧವಾರ | ಬೆಳಿಗ್ಗೆ 10.30 ರಿಂದ 11.50ರ ವರೆಗೆ | ಜೀವಶಾಸ್ತ್ರ | 60 |
| | | ಮಧ್ಯಾಹ್ನ 02.30 ರಿಂದ 03.50ರ ವರೆಗೆ | ಗಣಿತಶಾಸ್ತ್ರ | 60 |
| 05–05–2016 | ಗುರುವಾರ | ಬೆಳಿಗ್ಗೆ 10.30 ರಿಂದ 11.50ರ ವರೆಗೆ | ಭೌತಶಾಸ್ತ್ರ | 60 |
| | | ಮಧ್ಯಾಹ್ನ 02.30 ರಿಂದ 03.50ರ ವರೆಗೆ | ರಸಾಯನ ಶಾಸ್ತ್ರ | 60 |

ಕನ್ನಡ ಭಾಷಾ ಪರೀಕ್ಷೆ (ಬೆಂಗಳೂರು ಕೇಂದ್ರದಲ್ಲಿ ಮಾತ್ರ)

| | | | | |
|---|---|---|---|---|
| 06–05–2016 | ಶುಕ್ರವಾರ | ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 12.30ರ ವರೆಗೆ | ಹೊರನಾಡು ಹಾಗೂ ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ | 50 |

ಕೃಷಿಕ ಕುಟುಂಬ ಕೋಟದ ಅಡಿ ಸೀಟು ಆಯ್ಕೆ ಬಯಸುವ ಅಭ್ಯರ್ಥಿಗಳಿಗೆ "ಕೃಷಿಗೆ ಸಂಬಂಧಿಸಿದಂತೆ ಮಾದರಿಗಳನ್ನು ಗುರುತಿಸಲು" ಪ್ರಾಯೋಗಿಕ ಪರೀಕ್ಷೆ *

| | |
|---|---|
| 12–05–2016 ರಿಂದ 18–05–2016 | ಸಂಬಂಧಿಸಿದ ಪ್ರಾಯೋಗಿಕ ಪರೀಕ್ಷೆಯ ಕೇಂದ್ರಗಳಲ್ಲಿ ಕೃಷಿಕ ಕೋಟಕ್ಕೆ ಸಂಬಂಧಿಸಿದಂತೆ ದಾಖಲಾತಿ ಪರಿಶೀಲನೆ |

| | | | | |
|---|---|---|---|---|
| 20–05–2016 | ಶುಕ್ರವಾರ | ಬೆಳಿಗ್ಗೆ 9.00 ಗಂಟೆಯ ನಂತರ | ಕೃಷಿಕ ಕುಟುಂಬ ಕೋಟದ ಅಡಿ ಸೀಟು ಆಯ್ಕೆ ಬಯಸುವ ಅಭ್ಯರ್ಥಿಗಳಿಗೆ "ಕೃಷಿಗೆ ಸಂಬಂಧಿಸಿದಂತೆ ಮಾದರಿಗಳನ್ನು ಗುರುತಿಸಲು" ಪ್ರಾಯೋಗಿಕ ಪರೀಕ್ಷೆ * | 200 |

*ಕೃಷಿಕ ಕುಟುಂಬ ಅಭ್ಯರ್ಥಿಗಳ ಕೋಟದ ಅಡಿಯಲ್ಲಿ ಸೀಟುಗಳನ್ನು ಅರ್ಹತೆ ಪಡೆಯಲು ಪ್ರಾಯೋಗಿಕ ಪರೀಕ್ಷೆಯಲ್ಲಿ ಕನಿಷ್ಠ ಶೇ.50% ರಷ್ಟು ಅಂಕಗಳನ್ನು ಪಡೆಯಬೇಕು. ಮುಂದುವರಿದು ಈ ಕೃಷಿಕ ಕುಟುಂಬ ಅಭ್ಯರ್ಥಿಗಳ ಕೋಟದ ಸೀಟುಗಳ ಮೀಸಲಾತಿಯು ಕೇವಲ ಮೇಲೆ ವಿವರಿಸಿರುವ ಕಂಡಿಕೆ 2ರ 5 ಮತ್ತು 6 ರಲ್ಲಿಯ ಕೋರ್ಸುಗಳಿಗೆ ಮಾತ್ರ ಅನ್ವಯಿಸುತ್ತದೆ. ಪ್ರಾಯೋಗಿಕ ಪರೀಕ್ಷೆಯು ಬೆಂಗಳೂರು, ಹಾಸನ, ಮಂಡ್ಯ, ರಾಯಚೂರು, ಮೈಸೂರು, ಮುನಿರಾಬಾದ್ (ಕೊಪ್ಪಳ ಜಿಲ್ಲೆ), ಅರಭಾವಿ (ಗೋಕಾಕ್ ತಾ.), ತಮಕ (ಕೋಲಾರ ಜಿಲ್ಲೆ), ಮಂಗಳೂರು, ಬೀದರ್, ಬಾಗಲಕೋಟೆ, ಧಾರವಾಡ ಮತ್ತು ಶಿವಮೊಗ್ಗ ಸ್ಥಳಗಳಲ್ಲಿ ನಡೆಸಲಾಗುವುದು.

**ಸಹಿ/- ಡಿ.ಎಸ್. ರಮೇಶ್, ಭಾಆಸೇ, ಕಾರ್ಯನಿರ್ವಾಹಕ ನಿರ್ದೇಶಕರು**